ಫೋನ್ : 080-22341391
ಫ್ಯಾಕ್ಸ್ : 080-22341393

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್

ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು – 560 001.

ಕ್ರಮಾಂಕ : ಕರಾಉಶಿಪ/ಸಭೆ/2010 - 375                                                            ದಿನಾಂಕ : 09/12/2010

ಇವರಿಗೆ,
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ
ಎಲ್ಲಾ ಸದಸ್ಯರುಗಳಿಗೆ.

ಮಾನ್ಯರೇ,

ದಿನಾಂಕ 01/12/2010 ರಂದು ಶ್ರೀ. ಡಾ|| ವಿ.ಎಸ್. ಆಚಾರ್ಯ, ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಚಿವರು ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳನ್ನು ತಮ್ಮ ಅವಗಾಹನೆಗಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

(ಕೆ.ಎಂ. ಕಾವೇರಿಯಪ್ಪ)
ಕಾರ್ಯನಿರ್ವಾಹಕ ನಿರ್ದೇಶಕರು
ಮತ್ತು ಸದಸ್ಯ ಕಾರ್ಯದರ್ಶಿಗಳು

ಅಡಕ: ಮೇಲಿನಂತೆ

<u>ಪ್ರತಿಗಳನ್ನು ಮಾಹಿತಿಗಾಗಿ:</u>

1) ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
2) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ. ಬೆಂಗಳೂರು.
3) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

**ದಿನಾಂಕ 01/12/2010 ರಂದು ಬೆಳಗ್ಗೆ 11–00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣದಲ್ಲಿ ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತ ಸದಸ್ಯರು**

| | |
|---|---|
| 1) | **ಡಾ॥ ವಿ.ಎಸ್. ಆಚಾರ್ಯ,**<br>ಮಾನ್ಯ ಸಚಿವರು, ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಹಾಗೂ ಅಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 2) | **ಡಾ॥ ಎಸ್.ಸಿ. ಶರ್ಮಾ,**<br>ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ,<br>ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 3) | **ಪ್ರೊ. ಕೆ.ಎಂ. ಕಾವೇರಿಯಪ್ಪ,**<br>ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು. |
| 4) | **ಪ್ರೊ. ವಿ.ಜಿ. ತಳವಾರ,**<br>ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ. |
| 5) | **ಪ್ರೊ. ಆರ್.ಎಂ. ರಂಗನಾಥ್**<br>ಪ್ರಭಾರ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ. |
| 6) | **ಡಾ॥ ಹೆಚ್.ಬಿ. ವಾಲೀಕಾರ್,**<br>ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ. |
| 7) | **ಪ್ರೊ. ಇ.ಟಿ. ಪುಟ್ಟಯ್ಯ,**<br>ಕುಲಪತಿಗಳು, ಗುಲಬರ್ಗಾ ವಿಶ್ವವಿದ್ಯಾಲಯ. |
| 8) | **ಪ್ರೊ. ಶಿವಶಂಕರ ಮೂರ್ತಿ,**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾಲಯ. |
| 9) | **ಪ್ರೊ. ಎಸ್.ಎ. ಬಾರಿ,**<br>ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ. |
| 10) | **ಡಾ॥ ಮುರಿಗೆಪ್ಪ,**<br>ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, |
| 11) | **ಡಾ॥ ಕೆ.ಎಸ್. ರಂಗಪ್ಪ,**<br>ಕುಲಪತಿಗಳು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ. |

| | |
|---|---|
| 12) | **ಡಾ॥ ಗೀತಾ ಬಾಲಿ,**<br>ಕುಲಪತಿಗಳು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ. |
| 13) | **ಪ್ರೊ. ಎಸ್. ಇಂದುಮತಿ,**<br>ಕುಲಪತಿಗಳು, ದಾವಣಗೆರೆ ವಿಶ್ವವಿದ್ಯಾಲಯ |
| 14) | **ಪ್ರೊ. ಬಿ.ಆರ್. ಅನಂತನ್,**<br>ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ. |
| 15) | **ಪ್ರೊ. ಮಲ್ಲೆಪುರಂ ಜಿ. ವೆಂಕಟೇಶ್,**<br>ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. |
| 16) | **ಪ್ರೊ. ಹೆಚ್. ಮಹೇಶಪ್ಪ,**<br>ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ. |
| 17) | **ಡಾ॥ ರಮಾನಂದ ಶೆಟ್ಟಿ,**<br>ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ. |
| 18) | **ಡಾ॥ ಎಸ್. ಬಿಸಲಯ್ಯ**<br>ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು. |
| 19) | **ಡಾ॥ ಪಿ. ವೆಂಕಟರಾಮಯ್ಯ,**<br>ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ, |
| 20) | **ಡಾ॥ ಎಸ್. ಸುಧಾ,**<br>ನಿವೃತ್ತ ಪ್ರಾಂಶುಪಾಲರು, ಮಹಾರಾಣಿ ವಿಜ್ಞಾನ ಕಾಲೇಜು, ಮೈಸೂರು. |
| 21) | **ಡಾ॥ ಎಂ. ಡಿ. ಮುತ್ತಮ್ಮ,**<br>ನಿವೃತ್ತ ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು. |
| 22) | **ಶ್ರೀ ಕೆ. ನರಹರಿ,**<br>ನಿವೃತ್ತ ಪ್ರೊಫೆಸರ್, ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು,<br>ಬೆಂಗಳೂರು. |
| 23) | **ಡಾ॥ ಆರ್.ಎಲ್.ಎಂ. ಪಾಟೀಲ್,**<br>ನಿವೃತ್ತ ರಾಜ್ಯಶಾಸ್ತ್ರ ಪ್ರೊಫೆಸರ್, ಬೆಂಗಳೂರು ವಿಶ್ವವಿದ್ಯಾಲಯ |
| 24) | **ಡಾ॥ ಕೆ.ಎಸ್. ನಿಸಾರ್ ಅಹಮದ್,**<br>ನಿವೃತ್ತ ಪ್ರೊಫೆಸರ್, |
| 25) | **ಡಾ॥ ಕೆ. ಚಿದಾನಂದ ಗೌಡ,**<br>ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ, |

| | |
|---|---|
| 26) | **ಶ್ರೀ. ಎಮ್. ಮದನ್ ಗೋಪಾಲ್, ಐಎಎಸ್**<br>ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ. |
| 27) | **ಶ್ರೀ. ಎಂ.ಕೆ. ಶಂಕರಲಿಂಗೆ ಗೌಡ, ಐಎಎಸ್**<br>ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ. |
| 28) | **ಶ್ರೀ. ತುಷಾರ್ ಗಿರಿನಾಥ್, ಐಎಎಸ್.**<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ. |
| 29) | **ಶ್ರೀ. ಹೆಚ್. ಯು. ತಲ್ವಾರ್**<br>ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ |

<u>ಅನುಪಸ್ಥಿತ ಸದಸ್ಯರು</u>

1) **ಪ್ರೊ. ಮಂಜಪ್ಪ ಡಿ ಹೊಸಮನೆ,**
   ಕುಲಪತಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

2) **ಪ್ರೊ. ಹನುಮಣ್ಣ ನಾಯಕ ದೊರೆ,**
   ಕುಲಪತಿಗಳು, ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ.

3) **ಪ್ರೊ. ನಾರಾಯಣಗೌಡ,**
   ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

4) **ಡಾ॥ ಆರ್. ಆರ್. ಹಂಚಿನಾಳ,**
   ಕುಲಪತಿಗಳು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಧಾರವಾಡ.

5) **ಡಾ॥ ಬಿ.ವಿ. ಪಾಟೀಲ್,**
   ಕುಲಪತಿಗಳು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ರಾಯಚೂರು.

6) **ಡಾ॥ ಸುರೇಶ್ ಹೊನ್ನಪ್ಪಗೋಳ,**
   ಕುಲಪತಿಗಳು,ಕರ್ನಾಟಕ ಪಶುಸಂಗೋಪನೆ ಮತ್ತು
   ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ.

7) **ಡಾ॥ ಎಸ್.ಬಿ. ದಂಡಿನವರ್,**
   ಕುಲಪತಿಗಳು, ತೋಟಗಾರಿಕಾ ವಿಶ್ವವಿದ್ಯಾಲಯ.

8) **ಪ್ರೊ. ಜೆ.ಎಸ್. ಪಾಟೀಲ್,**
   ಕುಲಪತಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ.

9) **ಡಾ॥ ಎಸ್.ಆರ್. ಶ್ರೀನಿವಾಸ ರಾಘವನ್,**
   (ನಿವೃತ್ತ ಪ್ರೊಫೆಸರ್, ಐ.ಐ.ಎಸ್.ಸಿ., ಬೆಂಗಳೂರು).

10) **ಶ್ರೀ. ಎಂ. ನಾಗರಾಜ್. ಐಎಎಸ್**
ಪ್ರಧಾನಕಾರ್ಯದರ್ಶಿಗಳು, ಹಣಕಾಸು ಇಲಾಖೆ

11) **ಡಾ॥. ವಿ. ವಿಜಯ ಕುಮಾರ್,**
(ವಿಶ್ರಾಂತ ಕುಲಸಚಿವರು ಹಾಗೂ ಪ್ರೊಫೆಸರ್, ನ್ಯಾಷನಲ್ ಸ್ಕೂಲ್ ಆಫ್ ಇಂಡಿಯನ್ ಯೂನಿವರ್ಸಿಟಿ, ಬೆಂಗಳೂರು).

12) **ಶ್ರೀ. ಎನ್.ಸಿ. ಮುನಿಯಪ್ಪ, ಐಎಎಸ್.**
ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ.

13) **ಡಾ॥ ಆರ್. ಈ. ನಡದೂರ್, ಐಎಎಸ್,**
ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ.

14) **ಶ್ರೀ. ಡಿ.ವಿ. ಪ್ರಸಾದ್,**
ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನಾ ಇಲಾಖೆ.

15) **ಶ್ರೀಮತಿ. ವಂದಿತ ಶರ್ಮಾ**
ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕಾ ಇಲಾಖೆ.

16) **ಶ್ರೀ. ಎಸ್. ಸಿದ್ದಲಿಂಗೇಶ್**
ಕಾರ್ಯದರ್ಶಿ, ಕಾನೂನು ಮತ್ತು ನ್ಯಾಯ ಇಲಾಖೆ.

17) **ಶ್ರೀ. ಇ. ವೆಂಕಟಯ್ಯ**
ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ.

18) **ಡಾ॥ ಎ. ಆರ್. ಅರುಣ,**
ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ.

19) **ಆಯುಕ್ತರು**
ಪದವಿ ಪೂರ್ವ ಶಿಕ್ಷಣ ಪರೀಕ್ಷಾ ಮಂಡಳಿ.

ಸನ್ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಸಚಿವರು ಹಾಗೂ ಪರಿಷತ್ತಿನ ಅಧ್ಯಕ್ಷರಾದ ಡಾ॥ ವಿ.ಎಸ್.ಆಚಾರ್ಯ ಅವರನ್ನು ಪರಿಷತ್ತಿನ ಸಭೆಗೆ ಆದರದಿಂದ ಬರಮಾಡಿಕೊಳ್ಳಲಾಯಿತು. ನಂತರ ಅವರನ್ನು ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರಾದ ಪ್ರೊ.ಕೆ.ಎಂ.ಕಾವೇರಿಯಪ್ಪ ಇವರು ಹೃತ್ಪೂರ್ವಕವಾಗಿ ಸ್ವಾಗತಿಸಿ ಹೂಗುಚ್ಛವನ್ನು ನೀಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಉಪಾಧ್ಯಕ್ಷರಾದ ಪ್ರೊ.ಎಸ್.ಸಿ.ಶರ್ಮಾ, ಸರ್ಕಾರದಿಂದ ನಾಮನಿರ್ದೇಶಿತರಾದ 10 ಜನ ಶಿಕ್ಷಣ ತಜ್ಞರು, ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ಅವರುಗಳನ್ನು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ. ಮದನ್ ಗೋಪಾಲ್, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ, ಶ್ರೀ. ಶಂಕರಲಿಂಗೇ ಗೌಡ, ಕಾಲೇಜು ಶಿಕ್ಷಣ ಆಯುಕ್ತರಾದ ಶ್ರೀ. ತುಷಾರ್ ಗಿರಿನಾಥ್ ಅವರುಗಳನ್ನು ಹಾಗೂ ಸರ್ಕಾರದ ವಿವಿಧ ವಿಭಾಗಗಳ ಅಧಿಕಾರಿಗಳನ್ನು ಸ್ವಾಗತ ಕೋರುವುದರೊಂದಿಗೆ ಕಾರ್ಯಕ್ರಮದ ನಡುವಳಿಗಳನ್ನು ಪ್ರಸರಿಸಲು ಆಗಮಿಸಿದ ಪತ್ರಕರ್ತರು ಹಾಗೂ ದೂರದರ್ಶನದ ವರದಿಗಾರರನ್ನು ಸಹ ಸ್ವಾಗತಿಸಲಾಯಿತು.

ಹಿಂದಿನ ಉನ್ನತ ಶಿಕ್ಷಣ ಸಚಿವರು ಹಾಗೂ ಪರಿಷತ್ತಿನ ಅಧ್ಯಕ್ಷರು ಆದ ಶ್ರೀ. ಅರವಿಂದ ಲಿಂಬಾವಳಿ, ಉಪಾಧ್ಯಕ್ಷರಾದ ಪ್ರೊ. ಎಂ.ಐ. ಸವದತ್ತಿ, ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಪ್ರೊ. ಬಿ.ಆರ್. ಅನಂತನ್ ಹಾಗೂ ಪರಿಷತ್ತಿನ ಎಲ್ಲಾ ಸದಸ್ಯರುಗಳು ರಾಜ್ಯದ ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಿದ ಸೇವೆಯನ್ನು ನೆನಪಿಸಿ ದಾಖಲಿಸಲಾಯಿತು.

ಸದಸ್ಯರುಗಳು ತಮ್ಮ ಕಿರು ಪರಿಚಯ ಮಾಡಿಕೊಂಡ ನಂತರ ಕಾರ್ಯನಿರ್ವಾಹಕ ನಿರ್ದೇಶಕರು ಸನ್ಮಾನ್ಯ ಅಧ್ಯಕ್ಷರನ್ನು ಸಭೆಯ ಮುಂದಿನ ಕಾರ್ಯಕ್ರಮವನ್ನು ನಡೆಸಿಕೊಡುವಂತೆ ಕೋರಿಕೊಂಡರು.

ಮಾನ್ಯ ಅಧ್ಯಕ್ಷರು ತಮ್ಮ ಪ್ರಾರಂಭಿಕ ಭಾಷಣದಲ್ಲಿ ಉನ್ನತ ಶಿಕ್ಷಣ ಪರಿಷತ್ತಿನ ಸ್ಥಾಪನೆ, ಉದ್ದೇಶ, ಜವಾಬ್ದಾರಿ ಮತ್ತು ಮುಂದೆ ಮಾಡಲಿರುವ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

## I.ಆರಂಭಿಕ ಪ್ರಸ್ತಾವನೆಗಳು

ಕಾರ್ಯಸೂಚಿಗಳನ್ನು ಆರಂಭಿಸುವ ಮೊದಲು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಎಂ. ಮದನ್ ಗೋಪಾಲ್ ಇವರು ಈ ಕೆಳಕಂಡ ಎರಡು ವಿಷಯಗಳನ್ನು ಸಭೆಯಲ್ಲಿ ಪ್ರಕಟಗೊಳಿಸಿದರು.

1) ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಇತ್ತೀಚೆಗೆ ಹೆಸರುಘಟ್ಟದಲ್ಲಿರುವ ಸರ್ಕಾರದ ಫಿಲಂ ಇನ್ಸ್‌ಟಿಟ್ಯೂಟ್‌ನಲ್ಲಿರುವ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳಿಗೆ ಆಗುವ ಪರಿಶ್ರಮ ಇವುಗಳ ಬಗ್ಗೆ ಚಿಂತನೆ ನಡೆಸಿ ಆ ಸಂಸ್ಥೆಯನ್ನು ಮಹಾವಿದ್ಯಾಲಯ ಮಾಡಿ, ಫಿಲಂ ಸ್ಟಡೀಸ್ ಬಗ್ಗೆ ಒಂದು ಪದವಿ ಕೋರ್ಸ ಪ್ರಾರಂಭಿಸುವುದು ಸೂಕ್ತ ಎಂಬುದಾಗಿ ಅಭಿಪ್ರಾಯ ಪಟ್ಟರು. ಈ ಬಗ್ಗೆ ಅವರು ತಯಾರಿಸಿದ ವರದಿಯನ್ನು ಪರಿಷತ್ತಿನ ಸಮಿತಿ ಮುಂದೆ ಮಂಡಿಸಿ ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2) ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಎಂ. ಮದನ್ ಗೋಪಾಲ್ ಹಾಗೂ ಪರಿಷತ್ತಿನ ಉಪಾಧ್ಯಕ್ಷರಾದ ಪ್ರೊ.ಎಸ್.ಸಿ. ಶರ್ಮಾ ಇವರು ರಚಿಸಿದ ಖಾಸಗಿ ವಿಶ್ವವಿದ್ಯಾಲಯಗಳ ಕರಡು

ಮಾರ್ಗದರ್ಶನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿ ಅವರ ಒಪ್ಪಿಗೆ ಪಡೆದು ಮುಂದೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಈ ಸಲಹೆಗಳಿಗೆ ಸ್ಪಂದಿಸಿದ ಅಧ್ಯಕ್ಷರು ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಸಾಧ್ಯವಾದಲ್ಲಿ ಫಿಲಂ ಇನ್ಸ್‌ಟಿಟ್ಯೂಟ್‌ನ್ನು ಮೇಲ್ದರ್ಜೆಗೆ ಏರಿಸಿ ಮಹಾವಿದ್ಯಾಲಯವನ್ನು ಮಾಡಿ ಅಲ್ಲಿ ಪದವಿ ಕೋರ್ಸನ್ನು ಆರಂಭಿಸುವುದು ಸೂಕ್ತವೆಂದು ತಿಳಿಸುತ್ತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಉನ್ನತ ಶಿಕ್ಷಣದ ಅಭಿವೃದ್ಧಿಗೆ ಇದು ಬಹಳ ಉಪಯೋಗವಾಗುವುದರಿಂದ ಇದರ ಬಗ್ಗೆ ಆದಷ್ಟು ಬೇಗನೆ ಒಂದು ನಿರ್ಧಾರ ಮಾಡುವುದಾಗಿ ಸಭೆಗೆ ತಿಳಿಸಿದರು. ಹಾಗೆಯೇ ಖಾಸಗಿ ವಿಶ್ವವಿದ್ಯಾಲಯಗಳ ಮಾರ್ಗದರ್ಶನಗಳನ್ನು ಇನ್ನು ಮುಂದೆ ಖಾಸಗಿ ವಿಶ್ವವಿದ್ಯಾಲಯಗಳ ಅರ್ಜಿಗಳನ್ನು ಪರಿಗಣಿಸುವ ಸಂದರ್ಭದಲ್ಲಿ ಪರಿಶೀಲಿಸುವುದಾಗಿ ಅಭಿಪ್ರಾಯಪಟ್ಟರು.

**II ಕಾರ್ಯಸೂಚಿ:-**

1) **Status of Higher Education in Karnataka and Perspective plan for future development of Higher Education**

ಸನ್ಮಾನ್ಯ ಅಧ್ಯಕ್ಷರು ಈ ವಿಷಯವನ್ನು ಮಂಡಿಸಿ ಉನ್ನತ ಶಿಕ್ಷಣದ ಬಗ್ಗೆ ಪ್ರಸ್ತುತ ಹಾಗೂ ದೃಷ್ಟಿಕೋನ ಹೊಂದಿರುವ ಯೋಜನಾ ದಸ್ತಾವೇಜು Perspective planning document, ಮಾಡಿದರೆ ರಾಜ್ಯದ ಉನ್ನತ ಶಿಕ್ಷಣದ ಅಭಿವೃದ್ಧಿಗೆ ಪ್ರಯೋಜನವಾಗುತ್ತದೆ ಎಂಬುದಾಗಿ ಸಭೆಗೆ ತಿಳಿಸಿದರು. ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ಎಲ್ಲಾ ಕುಲಪತಿಗಳಿಗೆ ಅವರವರ ವಿಶ್ವವಿದ್ಯಾನಿಲಯಗಳ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಬಗ್ಗೆ ಕೆಲವು ಮಾಹಿತಿಯನ್ನು ಕೋರಿ ಪತ್ರಬರೆಯುವುದು ಮತ್ತು ಆ ಮಾಹಿತಿಗಳನ್ನು ಸಂಬಂಧಪಟ್ಟ ಕಾಲೇಜುಗಳಿಂದ ತರಿಸಿ ಆದಷ್ಟು ಬೇಗ ಅಂದರೆ ಒಂದು ತಿಂಗಳೊಳಗೆ ಒದಗಿಸಿ ಕೊಟ್ಟು ಸಹಕರಿಸಬೇಕೆಂದು ಕೇಳಿಕೊಂಡರು.

ಮುಂದೆ ಕಾರ್ಯಸೂಚಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಉಪಾಧ್ಯಕ್ಷರಾದ ಡಾ.॥ ಎಸ್.ಸಿ.ಶರ್ಮಾ ಅವರು ರಾಜ್ಯದ ಉನ್ನತ ಶಿಕ್ಷಣದ ಬಗ್ಗೆ ಆಗಬೇಕಾದ ಬದಲಾವಣೆಗಳು ಮತ್ತು ರೂಪರೇಷಗಳ ದೃಷ್ಟಿಕೋನ ಹೊಂದಿರುವ ಯೋಜನಾ ದಸ್ತಾವೇಜು Perspective planning document ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಈ ವಿಷಯದ ಬಗ್ಗೆ ಎಲ್ಲಾ ಸದಸ್ಯರು ಒಮ್ಮತದಿಂದ ಒಪ್ಪಿಗೆ ಸೂಚಿಸಿದರು.

2) **Uniform Regulations for Admission, Migration of Students etc, in different Universities:**

ಸನ್ಮಾನ್ಯ ಅಧ್ಯಕ್ಷರು ಈ ವಿಷಯದ ಬಗ್ಗೆ ಮಾತನಾಡಿ ಈಗಾಗಲೇ ವಿಶ್ವವಿದ್ಯಾನಿಲಯದ ಪರಿನಿಯಮಾವಳಿಗಳಲ್ಲಿ ಕೆಲವು ಅಂಶಗಳಲ್ಲಿ ವೈವಿಧ್ಯತೆ ಕಂಡುಬಂದು ಅವುಗಳನ್ನು ಏಕರೂಪದ ಪರಿನಿಯಮಗಳನ್ನು (Regulations) ಮಾಡಿದಲ್ಲಿ ಇದು ವಿದ್ಯಾರ್ಥಿಗಳಿಗೆ ಕಲಿಯಲು ಮತ್ತು ಸಂಸ್ಥೆಗಳಿಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು (Academic Programme) ನಡೆಸಲು ಉಪಯೋಗವಾಗುತ್ತದೆ ಎಂಬುದಾಗಿ ಸಲಹೆ ನೀಡಿದರು.

ಇದರ ಬಗ್ಗೆ ಸದಸ್ಯರುಗಳು ಒಮ್ಮತದ ಒಪ್ಪಿಗೆ ವ್ಯಕ್ತಪಡಿಸಿ ಇದನ್ನು ಪರಿಗಣಿಸಲು ಒಂದು ಸಮಿತಿಯನ್ನು ರಚಿಸುವ ನಿರ್ಧಾರವನ್ನು ಅಧ್ಯಕ್ಷರಿಗೆ ನೀಡಲಾಯಿತು.

3) **Orientation Programme for newly appointed Principals/Heads of the Institutions:**

ಈ ವಿಷಯದ ಬಗ್ಗೆ ಸನ್ಮಾನ್ಯ ಅಧ್ಯಕ್ಷರು ಮಾತನಾಡಿ ಹೊಸದಾಗಿ ನೇಮಕಗೊಂಡ ಪ್ರಾಂಶುಪಾಲರಿಗೆ ತಮ್ಮ ಸಂಸ್ಥೆ ಮತ್ತು ವಿಶ್ವವಿದ್ಯಾನಿಲಯ, ಸರ್ಕಾರ ಇವುಗಳೊಡನೆ ಇರುವ ಸಂಭಂದದ ಬಗ್ಗೆ ಅರಿವು ಮೂಡಬೇಕಾಗಿದೆ. ಸಂಯೋಜಿತ ವಿಶ್ವವಿದ್ಯಾನಿಲಯಗಳೊಂದಿಗೆ ಅದರ ಪರಿನಿಯಮಾವಳಿಗಳ ಪ್ರಕಾರ ಪ್ರವೇಶ, ಶೈಕ್ಷಣಿಕ ಕಾರ್ಯಕ್ರಮ (Academic Programme) ಮತ್ತು ಪರೀಕ್ಷೆ ನಡೆಸುವುದು ಹಾಗೂ ಕಾಲೇಜಿನ ಸಂಯೋಜನೆಗೆ ಸಕಾಲದಲ್ಲಿ ಅರ್ಜಿಸಲ್ಲಿಸುವುದು, ಇವುಗಳ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಅದುದರಿಂದ ಅವರಿಗೆ ಎರಡು ದಿವಸಗಳ ತರಬೇತಿಯ ಅಗತ್ಯವಿದೆ ಎಂದು ಸಲಹೆನೀಡಿದರು.

ಈ ವಿಷಯದ ಬಗ್ಗೆ ಚಿಂತನೆ ನಡೆಸಿ ಸದಸ್ಯರು ಒಮ್ಮತದ ಒಪ್ಪಿಗೆ ನೀಡಿದರು.

4) **Common Academic Calendar for the Universities having similar Academic Programmes:**

ವಿಶ್ವವಿದ್ಯಾನಿಲಯಗಳ ಜಾರಿಗೊಳಿಸುವ ಅಧ್ಯಯನದ ಘಟನಾವಳಿ (Calendar of events) ಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ, (Terms of Days), ಪರೀಕ್ಷೆಗಳು ಹಾಗೂ ಮೌಲ್ಯಮಾಪನ ದಿನಗಳು, ಪರೀಕ್ಷೆಯ ಫಲಿತಾಂಶ ಇವುಗಳ ಬಗ್ಗೆ ಕೆಲವು ನಿಶ್ಚಿತ ಅವಧಿಯನ್ನು (range of dates) ಕೊಟ್ಟರೆ ಅದು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ, ಕಾಲೇಜುಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತದೆ ಎಂಬುದಾಗಿ ಅಧ್ಯಕ್ಷರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕಾರ್ಯಸೂಚಿಯಲ್ಲಿ ಹೇಳಿದಂತೆ ಇದಕ್ಕೆ ಒಂದು ಸಮಿತಿಯನ್ನು ರಚಿಸಿ ಕ್ರಮಕೈಗೊಳ್ಳುವಂತೆ ಅಭಿಪ್ರಾಯಪಟ್ಟರು.

ಇದಕೆ ಸ್ಪಂದಿಸಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಈ ಹಿಂದೆ ಅಂತರ ವಿಶ್ವವಿದ್ಯಾನಿಲಯಗಳ ಮಂಡಳಿ (Inter University Board) ತಯಾರಿಸಿದ ವೇಳಾಪಟ್ಟಿಯನ್ನು ಕೂಡ ಸಮಿತಿಯು ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟರು.

ಇದರ ಬಗ್ಗೆ ಸದಸ್ಯರುಗಳು ಒಮ್ಮತದ ಒಪ್ಪಿಗೆ ನೀಡಿ ಇದನ್ನು ಪರಿಗಣಿಸಲು ಸಮಿತಿ ರಚಿಸಿ ಮುಂದಿನ ಕ್ರಮಕೈಗೊಳ್ಳುವಂತೆ ಅಧ್ಯಕ್ಷರಿಗೆ ಅಧಿಕಾರ ನೀಡಲು ಸಭೆಯು ಒಪ್ಪಿಗೆ ನೀಡಿತು.

## 5) A Common Statute for conducting Doctoral Programme in Universities

ಸನ್ಮಾನ್ಯ ಅಧ್ಯಕ್ಷರು ಮಾತನಾಡಿ ವಿಶ್ವವಿದ್ಯಾನಿಲಯಗಳು ನಡೆಸುವ ಡಾಕ್ಟರಲ್ ಪ್ರೋಗ್ರಾಂಗಳು ಯುಜಿಸಿ ಮಾರ್ಗದರ್ಶಿ ಪ್ರಕಾರ ಮತ್ತು ಗುಣಮಟ್ಟದಾಗಿದ್ದು ಇದರ ಪ್ರಕಾರ ಡಾಕ್ಟರೇಟ್ ಪಡೆದ ವಿಶ್ವವಿದ್ಯಾನಿಲಯಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಅನುಕೂಲವಾಗುತ್ತದೆ, ಎಂಬುದಾಗಿ ಸಲಹೆ ನೀಡಿದರು.

ಇದರ ಬಗ್ಗೆ ಮಾತನಾಡಿದ ಕೆಲವು ಕುಲಪತಿಗಳು ಈಗಾಗಲೇ ಮಾಡಿರುವ ಪಿಎಚ್‌ಡಿ ಪರಿನಿಯಮಗಳನ್ನು ಯುಜಿಸಿ ಮಾರ್ಗದರ್ಶಿಯ ಪ್ರಕಾರವೇ ಇದೆ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕೊನೆಯದಾಗಿ ಅಧ್ಯಕ್ಷರು ಎಲ್ಲಾ ವಿಶ್ವವಿದ್ಯಾನಿಲಯಗಳ ಪಿಎಚ್‌ಡಿ ಪರಿನಿಯಮಗಳನ್ನು ಪರಿಗಣಿಸಿ ಒಂದು ಏಕರೂಪದ ಪರಿನಿಯಮ ರಚಿಸಲು ಸೂಚನೆ ನೀಡಿದರು. ಸಭೆಯು ಇದರ ಬಗ್ಗೆ ಪರಿಣಿತರ ಸಮಿತಿ ರಚಿಸಿ ಮುಂದಿನ ಕ್ರಮಕೈಗೊಳ್ಳುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲಾಯಿತು.

**6 ಇತರ ವಿಷಯಗಳು**

ಇತರೆ ವಿಷಯಗಳ ಬಗ್ಗೆ ಸಭೆಯಲ್ಲಿ ಮಾತನಾಡಿದ ಕೆಲವು ಕುಲಪತಿಗಳು ಕೆಲವು ಸಲಹೆಗಳನ್ನು ಮತ್ತು ಸಮಸ್ಯೆಗಳನ್ನು ಸಭೆಯಲ್ಲಿ ವ್ಯಕ್ತಪಡಿಸಿದರು:

ಪ್ರೊ. ಬಿ. ಆರ್. ಅನಂತನ್, ಕುಲಪತಿಗಳು, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯವು ಪ್ರಾರಂಭಿಕ ಹಂತದಲ್ಲಿದ್ದು, ಇದರ ವ್ಯಾಪ್ತಿಯಲ್ಲಿ ಉತ್ತರ ಕರ್ನಾಟಕದ ಮೂರು ಜಿಲ್ಲೆಗಳು ಒಳಗೊಂಡಿವೆ. ಈ ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಸಮಸ್ಯೆ ಬಹಳಷ್ಟು ಇದೆ. ಇದನ್ನು ಬಗೆಹರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳವಂತೆ ಹಾಗೂ ಇದರ ಮಾತೃ ಸಂಸ್ಥೆಯಾದ ಕರ್ನಾಟಕ ವಿಶ್ವವಿದ್ಯಾಲಯದಿಂದ ಬರಬೇಕಾದ ಹಣ ಇನ್ನೂ ಬರಲಿಲ್ಲ ಎಂಬುದಾಗಿ ಕಳವಳ ವ್ಯೆಕ್ತಪಡಿಸಿದರು ಇದಕ್ಕೆ ಉತ್ತರಿಸಿದ ಅಧ್ಯಕ್ಷರು ಇದರ ಬಗ್ಗೆ ಇಬ್ಬರೂ ಕುಲಪತಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳೊಡನೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುವದಾಗಿ ಭರವಸೆ ನೀಡಿದರು. ನಂತರ ನಡೆದ ಚರ್ಚೆಯಲ್ಲಿ ಮಾತನಾಡಿದ ಇವರು ಪ್ರಾಂಶುಪಾಲರಿಗೆ ಓರಿಯೆಂಟೇಶನ್ (Orientation) ಕಾರ್ಯಕ್ರಮ ಇರುವಂತೆ ವಿಶ್ವವಿದ್ಯಾನಿಲಯಗಳ

ಆಡಳಿತಾಧಿಕಾರಿಗಳಿಗೂ ಓರಿಯೆಂಟೇಶನ್ (Orientation) ಕಾರ್ಯಕ್ರಮ ಅಗತ್ಯ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರೊ. ಎಸ್.ಎ. ಬಾರಿ, ಕುಲಪತಿಗಳು, ಕುವೆಂಪು ವಿಶ್ವವಿದ್ಯಾನಿಲಯ ಇವರು ಮಾತನಾಡಿ ವಿಜ್ಞಾನ ಮತ್ತು ಉದ್ಯಮಗಳ(Science&Industry) ಪರಸ್ಪರಕ್ರಿಯೆ (Interaction)ಕ್ರಮಕೈಗೊಳ್ಳುವಂತೆ ಸಾಮಾಜಿಕ ವಿಜ್ಞಾನ ವಿಭಾಗ ಹಾಗು ಸಾರ್ವಜನಿಕರ ಪರಸ್ಪರ ಕ್ರಿಯೆ (interaction) ಅಗತ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲದೆ ಕೆಲವು ಸಮಾಜ ವಿಜ್ಞಾನದ ಅಡಿಯಲ್ಲಿ ಬರುವ ಕೆಲವು ವಿಷಯಗಳು ಮತ್ತು ಪೂರ್ಣವಿಜ್ಞಾನದ (Pure Science) ಅಡಿಯಲ್ಲಿ ಬರುವ ವಿಷಯಗಳು ಒಂದಕ್ಕೊಂದು ಹೊಂದಿಕೊಂಡು ಮತ್ತು ಹೆಚ್ಚು ಭಿನ್ನತೆ ಇಲ್ಲದೆ ಇರುವುದರಿಂದ ಸಮಗ್ರೀಕರಣ (integration) ಪೂರ್ಣವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳ (integration) ಸಮಗ್ರೀಕರಣ ಅಗತ್ಯ ಎಂಬುದಾಗಿ ಅಭಿಪ್ರಾಯಪಟ್ಟರು.

ಅವರು ಪರಿಷತ್ತಿನಲ್ಲಿ Directory of Experts ತಯಾರು ಮಾಡಿ ಇಡಬೇಕೆಂದು ನೀಡಿದ ಸಲಹೆಗೆ ಪರಷತ್ತಿನ ಹಿಂದಿನ ಸದಸ್ಯ ಕಾರ್ಯದರ್ಶಿಗಳಾದ ಪ್ರೊ. ಬಿ. ಆರ್. ಅನಂತನ್ ಪರಿಷತ್ತಿನಲ್ಲಿ ಈಗಾಗಲೇ ಪ್ರಮುಖವಾದ ವ್ಯಕ್ತಿಗಳ ಸ್ವ-ವಿವರ ಮತ್ತು ಇತ್ಯಾದಿಗಳನ್ನು ಸಂಗ್ರಹಿಸಲಾಗಿದೆ ಎಂಬುದಾಗಿ ಉತ್ತರಿಸಿದರು.

ಪ್ರೊ. ಎಸ್.ಎ. ಬಾರಿ, ಇವರು ಚರ್ಚೆಯನ್ನು ಮುಂದುವರೆಸುತ್ತ ಹೊಸದಾಗಿ ನೇಮಕಗೊಂಡ ವಿಶ್ವವಿದ್ಯಾಲಯಗಳ ಶಿಕ್ಷಕರಿಗೆ ತರಬೇತಿ ಕೊಡುವ ಒಂದು ಪ್ರಸ್ತಾವನೆಯನ್ನು ಕುವೆಂಪು ವಿಶ್ವವಿದ್ಯಾಲಯದಿಂದ ಸರ್ಕಾರಕ್ಕೆ ಕಳುಹಿಸಲಾಗುತ್ತಿದೆ ಇದಕ್ಕೆ ಸರ್ಕಾರದ ಒಪ್ಪಿಗೆ ಬಂದ ನಂತರ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ನೇಮಕಗೊಂಡ ಶಿಕ್ಷಕರಿಗೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗುವುದು ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಸ್ಪಂದಿಸಿದ ರಾಜೀವ್ ಗಾಂಧೀ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯಗಳ ಕುಲಪತಿಗಳು ತಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಹೊಸದಾಗಿ ನೇಮಕಗೊಂಡ ಶಿಕ್ಷಕರಿಗೆ ಈ ರೀತಿ ತರಬೇತಿ ನಡೆಸುತ್ತಿದ್ದೇವೆ ಎಂಬುದಾಗಿ ತಿಳಿಸಿದರು.

ಪ್ರೊ. ಶಿವಶಂಕರಮೂರ್ತಿ, ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ ಪರಿಷತ್ತು ರಾಜ್ಯದ ಉನ್ನತ ಶಿಕ್ಷಣದ ಬಗ್ಗೆ ದೂರದೃಷ್ಟಿ ಯೋಜನೆ ಸಿದ್ದಪಡಿಸುವ (Perspective Plan) ಮಾಡುವಾಗ ಅಂತರ್ಗತ ನೀತಿಯನ್ನು (Inclusive Policy) ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಸಲಹೆ ನೀಡಿದರು.

ಅಲ್ಲದೆ ಕೇಂದ್ರ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವಿಶ್ವವಿದ್ಯಾನಿಲಯಗಳಿಗೆ ವಿಜ್ಞಾನದ ಮೂಲಸೌಲಭ್ಯ ಅಭಿವೃದ್ಧಿಗೆ ಕೋಟಿಗಟ್ಟಲೆ ಹಣ ಅನುದಾನ ನೀಡುತ್ತದೆ, ಈಗಗಾಲೇ ನಮ್ಮ ರಾಜ್ಯದ ಕರ್ನಾಟಕ, ಮೈಸೂರು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯಗಳಿಗೆ ತಲಾ 9 ಕೋಟಿ ರೂ. ಅನುದಾನ ನೀಡಲಾಗಿದೆ ಎಂಬುದಾಗಿ ತಿಳಿಸಿದರು.

ಪ್ರೋ. ಗೀತಾಬಾಲಿ, ಕುಲಪತಿಗಳು ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ: ಇವರು ವಿಶ್ವವಿದ್ಯಾನಿಲಯಗಳ ಅಭಿವೃದ್ಧಿಗೆ ಸರಕಾರ ಮತ್ತು ಇತರ ಸಂಸ್ಥೆಗಳಿಂದ ಸಾಕಷ್ಟು ಅನದಾನ ಬರುತ್ತಿದೆ. ಅನುದಾನವನ್ನು ಉಪಯೋಗಿಸಿ ಶಿಕ್ಷಣ ಹಾಗೂ ಸಂಶೋಧನೆಗಳ ಬಗ್ಗೆ ಆದ ಅಭಿವೃದ್ಧಿ ಕುರಿತು ಶೈಕ್ಷಣಿಕ ಪರಿಶೋಧನೆಯ (Academic Auditing) ಅಗತ್ಯ ಇದೆ ಎಂಬುದಾಗಿ ಅಭಿಪ್ರಾಯಪಟ್ಟರು.

ಪ್ರೊ. ಮುರಿಗೆಪ್ಪ, ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ. ಇವರು ಮಾತನಾಡಿ ವಿಶ್ವವಿದ್ಯಾಲಯಗಳಲ್ಲಿ ಕೆಲವು Endowment Chairs ಅನ್ನು ಸ್ಥಾಪನೆ ಮಾಡಲು ಸರ್ಕಾರದಿಂದ ಪ್ರಸ್ತಾವನೆ ಬಂದಲ್ಲಿ ಅಂತಹ Endowment Chairs ಗಳಿಗೆ ಬೇಕಾಗುವಷ್ಟು ಹಣವನ್ನು ಬಿಡುಗಡೆ ಮಾಡಲು ಕೇಳಿಕೊಂಡರು.

ಪ್ರೊ.ಆರ್.ಎಲ್.ಎಂ.ಪಾಟೀಲ್, ಉನ್ನತ ಶಿಕ್ಷಣ ಪರಿಷತ್ತಿನ ನಾಮ ನಿರ್ದೇಶಿತ ಸದಸ್ಯರು ಮಾತನಾಡಿ Centre for Education & Social Sciences (CESS) ಈ ಸಂಸ್ಥೆಯು ವಿಶ್ವವಿದ್ಯಾನಿಲಯಗಳ ಪುನರ್ ನಿರ್ಮಾಣದ ಬಗ್ಗೆ ಒಂದು ಯೋಜನೆ ತಯಾರು ಮಾಡಲು ಪರಿಷತ್ತಿಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಲಿದ್ದೇವೆ, ಅದನ್ನು ಪರಿಗಣಿಸಿ ಒಪ್ಪಿಗೆ ನೀಡಬೇಕೆಂದು ಸಭೆಗೆ ತಿಳಿಸಿದರು. ಅದಕ್ಕೆ ಉತ್ತರಿಸಿದ ಅಧ್ಯಕ್ಷರು ಅಂತಹ ಪ್ರಸ್ತಾವನೆ ಬಂದಲ್ಲಿ ಅದನ್ನು ಪರಿಗಣಿಸಲಾಗುವುದು ಎಂದು ಉತ್ತರಿಸಿದರು.

**6(1) ವಿಷಯ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಗೆ ಇಬ್ಬರು ಕುಲಪತಿಗಳನ್ನು ಮತ್ತು ನಾಲ್ಕು ಜನ ಶಿಕ್ಷಣ ತಜ್ಞರನ್ನು ನಾಮನಿರ್ದೇಶನ ಮಾಡುವ ಕುರಿತು.**

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಅಧಿನಿಯಮ 2010ರ ಉಪನಿಯಮ 14(iii) ರನ್ವಯ ಒಂದು ವರ್ಷದ ಅವಧಿಗೆ ಸರದಿಯ ಪ್ರಕಾರ ಇಬ್ಬರು ಕುಲಪತಿಗಳನ್ನು ಮತ್ತು ಉಪನಿಯಮ 14(iv) ರ ಪ್ರಕಾರ ಇಪ್ಪತ್ತು ತಿಂಗಳ ಅವಧಿಗೆ ಸರದಿಯ ಮೂಲಕ ಪರಿಷತ್ತಿನ ಸದಸ್ಯರಾಗಿರುವ ಹತ್ತು ಜನ ಶಿಕ್ಷಣ ತಜ್ಞರ ಪೈಕಿ ನಾಲ್ಕು ಜನರನ್ನು ನಾಮನಿರ್ದೇಶನ ಮಾಡಬೇಕಾಗಿದೆ.

ಮೇಲಿನ ನಿಯಮದಡಿಯಲ್ಲಿ ಈ ಕೆಳಕಂಡ ಇಬ್ಬರು ಕುಲಪತಿಗಳನ್ನು ಹಾಗೂ ನಾಲ್ಕು ಜನ ಶಿಕ್ಷಣ ತಜ್ಞರನ್ನು ನಾಮನಿರ್ದೇಶನ ಮಾಡಲು ಮಾನ್ಯ ಅಧ್ಯಕ್ಷರ ಸಲಹೆಯನ್ನು ಪ್ರಸ್ತಾಪಿಸಲಾಯಿತು.

(ಅ) ಇಬ್ಬರು ಕುಲಪತಿಗಳು (ಒಂದು ವರ್ಷದ ಅವಧಿಗೆ)

1) (ಪ್ರೊ. ವಿ.ಜಿ.ತಳವಾರ್) ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ
2) (ಡಾ॥ ರಮಾನಂದ ಶೆಟ್ಟಿ) ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ

(ಆ) ನಾಲ್ಕು ಜನ ಶಿಕ್ಷಣ ತಜ್ಞರು (ಇಪ್ಪತ್ತು ತಿಂಗಳ ಅವಧಿಗೆ)

1) ಪ್ರೊ. ಪಿ. ವೆಂಕಟರಾಮಯ್ಯ
2) ಡಾ॥ ಎಸ್.ಸುಧಾ. ಆರ್
3) ಪ್ರೊ. ಕೆ. ನರಹರಿ.
4) ಡಾ॥ ಕೆ. ಎಸ್.ನಿಸಾರ್ ಅಹಮದ್

**ಮೇಲ್ಕಂಡ ಪ್ರಸ್ತಾವನೆಗೆ ಪರಿಷತ್ತು ಒಪ್ಪಿಗೆ ನೀಡಿತು.**

ಕೊನೆಗೆ ಸಭೆಯ ಅಂತ್ಯದಲ್ಲಿ ಪರಿಷತ್ತಿನ ಸದಸ್ಯ-ಕಾರ್ಯದರ್ಶಿಗಳು, ಸನ್ಮಾನ್ಯ ಸಭಾಧ್ಯಕ್ಷರಿಗೂ, ಸದಸ್ಯರುಗಳು, ಅಧಿಕಾರಿಗಳಿಗೂ, ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

| | | |
|---|---|---|
| ಸಹಿ/- | ಸಹಿ/- | ಸಹಿ/- |
| ಡಾ॥ ವಿ.ಎಸ್.ಆಚಾರ್ಯ | ಡಾ.॥ ಎಸ್.ಸಿ.ಶರ್ಮಾ | ಕೆ.ಎಂ.ಕಾವೇರಿಯಪ್ಪ |
| ಅಧ್ಯಕ್ಷರು | ಉಪಾಧ್ಯಕ್ಷರು | ಕಾರ್ಯನಿರ್ವಾಹಕ ನಿರ್ದೇಶಕರು |



ಕಾರ್ಯನಿರ್ವಾಹಕ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು